ಆ. ಒಂದನೇ ಹಂತದ ಮತ್ತು ಎರಡನೇ ಹಂತದ ಕುಡಿಯುವ ನೀರಿನ ಯೋಜನೆಗಳಲ್ಲಿನ ನೀರಿನ ವಿತರಣಾ ಜಾರವನ್ನು ಬಲಪಡಿಸಿ (ಡಿಸ್ಟ್ರಿಬ್ಯೂಷನ್ ನೆಟ್ ವರ್ಕ್) ಆಧುನೀಕರಣಗೊಳಿಸುವ ಸಮಗ್ರ ಯೋಜನೆಯನ್ನು ಸಿದ್ದಿಗೊಳಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆಯೇ?

ಇ. ಹಾಗಿದ್ದಲ್ಲಿ ಇದರ ಬಗೆಗಿನ ವಿವರಗಳೇನು? ಯಾವಾಗ ಈ ಬಗೆಗಿನ ಕಾಮಗಾರಿಯನು ಆರಂಭಿಸಲಾಗುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಆ. ಹೌದು

ಆ. ಇದುವರೆವಿಗೂ ಸಲ್ಲಿಸಿರುವುದಿಲ್ಲ.

ಇ. 2ನೇ ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

**ಚಿತ್ತಾಪುರ ತಾಲ್ಲೂಕಿನ ರಜೋಳ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜಿಗೆ ವಿದ್ಯುತ್ ಸಂಪರ್ಕ**

1857 (2415) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ರಜೋಳ ಗ್ರಾಮಕ್ಕೆ ವಿದ್ಯುತ್ ಸರಬರಾಜು ಸಮರ್ಪಕವಾಗಿ ಇಲ್ಲದೆ ಇರುವುದರಿಂದ 4-5 ಕಿಲೋಮೀಟರ್ ಅಂತರದಲ್ಲಿರುವ ರಾಮತೀರ್ಥ ಗ್ರಾಮದಿಂದ ನೀರು ಸರಬರಾಜು ಆಗದೇ ಆ ಗ್ರಾಮದ ನಾಗರೀಕರು ಕುಡಿಯುವ ನೀರಿಗಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಪ್ರತಿ ದಿನ ಕೇವಲ 6 ಗಂಟೆ ನಿರ್ವಿುತ್ ಸರಬರಾಜು ಆಗುವುದರಲ್ಲಿ ಸಹ 4 ಗಂಟೆ ವಿದ್ಯುತ್ ಸರಬರಾಜು ಆದರೆ 4-5 ಕಿಲೋಮೀಟರ್ ಅಂತರದಿಂದ ನೀರು ತಲುಪಲು ಒಂದು ಗಂಟೆಯಾಗುವುದು ನಿಜವಲ್ಲವೇ?

ಇ. ಈ 2-3 ಗಂಟೆಗಳಲ್ಲಿ ವಿದ್ಯುತ್ ಕಡಿತವಾಗುವುದರಿಂದ ನೀರು ಪುನಃ ಸ್ಥಗಿತಗೊಂಡು ಆ ಗ್ರಾಮಕ್ಕೆ ಕುಡಿಯುವ ನೀರು ಮುಟ್ಟದೆ ನಾಗರೀಕರು ತೊಂದರೆ ಅನುಭವಿಸುವುದನ್ನು ನಿವಾರಿಸಲು ಕುಡಿಯುವ ನೀರಿನ ವ್ಯವಸ್ಥೆಗಾಗಿ ವಿದ್ಯುತ್ ಸತತವಾಗಿ ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. ಮತ್ತು ಆ

ರಾಜ್ಯದಲ್ಲಿ ತಲೆದೋರಿರುವ ವಿದ್ಯುತ್ ಅಭಾವದಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಸದರಿ ಕುಡಿಯುವ ನೀರು ಸರಬರಾಜು ಸ್ಥಾವರವು ಗ್ರಾಮೀಣ ಫೀಡರಿನ (ಮಾರ್ಗದ) ಮೇಲೆ ಇರುವುದರಿಂದ, ಜನರಿಗೆ ಅನುಕೂಲವಾಗುವಂತೆ ಈಗಿನ ವೇಳಾಪಟ್ಟಿಯಂತೆ ಮುಂಜಾನೆ 4.00 ಗಂಟೆಯಿಂದ 6.00 ಗಂಟೆಯವರೆಗೆ 2 ಗಂಟೆಗಳ ಕಾಲ ಮತ್ತು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಅಥವಾ ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ 4.00 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ನೀಡಲಾಗುತ್ತಿದೆ. ಆದುದರಿಂದ, ನೀರನ್ನು

ಸರಬರಾಜು ಮಾಡಲು ಅನುಕೂಲವಾಗುವಂತೆ ಒಟ್ಟು 6 ಗಂಟೆಗಳ ಕಾಲ ಪ್ರತಿ ದಿನ 3 ಫೇಸ್ ವಿದ್ಯುತ್ ಸರಬರಾಜು ನೀಡಲಾಗುತ್ತಿದೆ.

ಇ. ಈಗಿನ ವಿದ್ಯುತ್ ಅಭಾವದ ಪರಿಸ್ಥಿತಿಯಲ್ಲಿ ದಿನದ 24 ಗಂಟೆಗಳಿಗೂ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ.

**ಪಿರಿಯಾಪಟ್ಟಣ ಕರಡಿಲಕ್ಕನ ಏತ ನೀರಾವರಿ ಯೋಜನೆಗೆ ವಿದ್ಯುತ್ ಸೌಲಭ್ಯ**

1858 (2276) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಿರಿಯಾಪಟ್ಟಣ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆಗೆ ವಿದ್ಯುತ್ ಸೌಲಭ್ಯ ನೀಡಲು ನಿರ್ಮಿಸಲಾಗುತ್ತಿರುವ ಸಬ್ ಸ್ಟೇಷನ್ ಕಾಮಗಾರಿ ಯಾವ ದಂತದಲ್ಲಿದೆ;

ಆ. ರಾಮನಾಥಪುರ ಹಾಗೂ ಕುಶಾಲನಗರ ಕಡೆಯಿಂದ ತಂತಿ ಎಳೆಯಲು ಅರಣ್ಯ ಇಲಾಖೆಯಿಂದ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಬಂದಿದ್ದಲ್ಲಿ, ಅಡಚಣೆ ನಿವಾರಣೆಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಈ. ಜೂನ್ ತಿಂಗಳಲ್ಲಿ ರೈತರಿಗೆ ನೀರು ಒದಗಿಸಬೇಕಾಗಿದ್ದು ಮೇ ತಿಂಗಳ ಹೊತ್ತಿಗೆ ವಿದ್ಯುತ್ ಸೌಲಭ್ಯ ಒದಗಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಬಸವರಾಜಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. ಪಿರಿಯಾಪಟ್ಟಣ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಸಬ್ ಸ್ಟೇಷನ್‌ನ ಕಾಮಗಾರಿಯನ್ನು ನೀರಾವರಿ ಇಲಾಖೆಯು ಕೈಗೊಂಡಿರುತ್ತದೆ. ಆದುದರಿಂದ ನಿರ್ಮಾಣ ಕಾರ್ಯದ ಪ್ರಗತಿಯ ಬಗ್ಗೆ ನೀರಾವರಿ ಇಲಾಖೆಯು ಮಾಹಿತಿಗಳನ್ನು ಒದಗಿಸಬೇಕಾಗಿರುತ್ತದೆ.

ಆ. ಹೌದು

ಇ. ರಾಮನಾಥಪುರ ಹಾಗೂ ಕುಶಾಲನಗರ ಕಡೆಯಿಂದ ವಿದ್ಯುತ್ ಪ್ರಸರಣ ಮಾರ್ಗವನ್ನು ಚೆನ್ನಿಕಲ್ ಕಾವಲ್ ಮತ್ತು ಗೊಬ್ಲಿ ಅರಣ್ಯ ಪ್ರದೇಶಗಳ ಮುಖಾಂತರ ಎಳೆಯಬೇಕಾಗಿರುತ್ತದೆ. ಚೆನ್ನಿಕಲ್ ಕಾವಲ್ ಅರಣ್ಯ ಪ್ರದೇಶದಲ್ಲಿ ವಿದ್ಯುತ್ ಪ್ರಸರಣ ಮಾರ್ಗವನ್ನು ನಿರ್ಮಿಸಲು ಅರಣ್ಯ ಇಲಾಖೆಗೆ ಹಣವನ್ನು ಈಗಾಗಲೇ ಪಾವತಿಸಲಾಗಿದ್ದು, ಅರಣ್ಯ ಇಲಾಖೆಯ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಗೊಬ್ಲಿ ಅರಣ್ಯ ಪ್ರದೇಶದಲ್ಲಿ ವಿದ್ಯುತ್ ಪ್ರಸರಣ ಮಾರ್ಗವನ್ನು ನಿರ್ಮಿಸಲು ಪಾವತಿಸಬೇಕಾದ ಹಣದ ಬಗ್ಗೆ ಈಗಾಗಲೇ ಅರಣ್ಯ ಇಲಾಖೆಯನ್ನು ಸಂಪರ್ಕಿಸಲಾಗಿದೆ ಅರಣ್ಯ ಇಲಾಖೆಯು ತಿಳಿಸುವ ಹಣವನ್ನು ಪಾವತಿಸಲು ಕ್ರಮಕೈಗೊಳ್ಳಲಾಗುವುದು.

ಈ. ಅರಣ್ಯ ಪ್ರದೇಶಗಳಲ್ಲಿ ವಿದ್ಯುತ್ ಪ್ರಸರಣ ಮಾರ್ಗವನ್ನು ನಿರ್ಮಿಸಲು ಅರಣ್ಯ ಇಲಾಖೆಯ ಅನುಮೋದನೆಯು ಅವಶ್ಯಕವಾಗಿರುತ್ತದೆ. ಈ ಅನುಮೋದನೆಯನ್ನು ಪಡೆಯಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು. ಅನುಮೋದನೆ ದೊರೆತ ಕೂಡಲೇ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಕಾರ್ಯವನ್ನು ಕೈಗೊಂಡು ಆದಷ್ಟು ಜಾಗ್ರತೆ ಪೂರ್ಣಗೊಳಿಸಲಾಗುವುದು.